1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

ಸಿ.ಸಿ.ಸಂಖ್ಯೆ:898/2024

ಪಿರ್ಯಾದಿ : ಕವಲಂದೆ ಪೋಲಿಸರು

ವಿರುದ್ಧ

ಆರೋಪಿತರು :

1. ನಾಗೇಶ ಬಿನ್ ದೊರೆಸ್ವಾಮಪ್ಪ 36 ವರ್ಷ
2. ಬಸವಣ್ಣ ಕೆ ಎಸ್ **ಬಿನ್ ಲೇಟ್** ಸಿದ್ದಪ್ಪ 71 ವರ್ಷ
3. ಸುನಿಲ್ ಕುಮಾರ್ ಬಿನ್ ಮಾದಪ್ಪ 28 ವರ್ಷ
4. ಶಿವಣ್ಣ ಉ.ಚಿಕ್ಕವ ಬಿನ್ ಲೇಟ್ ನಾಗಪ್ಪ 44 ವರ್ಷ
5. ಮಾದಪ್ಪ ಉ.ಕುಂಡ ಬಿನ್ ಲೇಟ್ ಪುಟ್ಟಬಸಪ್ಪ 48 ವರ್ಷ
6. ಸಿದ್ದೇಶ ಬಿನ್ ಲೇಟ್ ಸೋಮಣ್ಣ ಉ.ಸ್ವಾಮಿ 35 ವರ್ಷ

7 ರಘು ಬಿನ್ ಲೇಟ್ ಮುದ್ದಪ್ಪ 40 ವರ್ಷ

8 ಆನಂದ ಬಿನ್ ಲೇಟ್ ಮುದ್ದಪ್ಪ 49 ವರ್ಷ

9 ಲೋಕೇಶ ಬಿನ್ ದೊರೆಸ್ವಾಮಪ್ಪ 43 ವರ್ಷ

10 ಕುಮಾರ ಬಿನ್ ದೊರೆಸ್ವಾಮಪ್ಪ 47 ವರ್ಷ

11 ಶಿವಲಿಂಗಪ್ಪ ಉ. ದೊಡ್ಡವ ಬಿನ್ ಲೇಟ್ ನಾಗಪ್ಪ 43 ವರ್ಷ

12 ರವಿ ಬಿನ್ ರಾಜಪ್ಪ 34 ವರ್ಷ

13 ಪಂಜು ಬಿನ್ ಗುರುಮಲ್ಲಪ್ಪ 40 ವರ್ಷ

14 ಕುಮಾರ ಉ.ಪೋಳ ಬಿನ್ ಗುರುಮಲ್ಲಪ್ಪ 31 ವರ್ಷ

ಆರೋಪಿತರ ವಾಸ:ಕಾರೆಪುರ ಗ್ರಾಮ, ನಂಜನಗೂಡು ತಾಲ್ಲೂಕು

ದೋಷಾರೋಪಣೆ

ಶ್ರೀಮತಿ.ಸರಿತಾ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., *1* ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ**:-**

ದಿನಾಂಕ:- 15.05.2024 ರಂದು ಸಂಜೆ 04-00 ಗಂಟೆ ಸಮಯದಲ್ಲಿ ನಂಜನಗೂಡು ತಾಲ್ಲೂಕು ಕವಲಂದೆ ಪೊಲೀಸ್ ಠಾಣಾ ಸರಹದ್ದು ಕಾರೇಪುರ ಗ್ರಾಮದ ಲಿಂಗಾಯಿತ ಜನಾಂಗದ ಬೀದಿಯ ಬಸವಣ್ಣ ಬಿನ್ ಲೇಟ್ ಶಿವಬಸಪ್ಪ ರವರ ಮನೆಯ ಮುಂಭಾಗದ ಜಾಗದಲ್ಲಿ ಚಾಸಾ.2 ರವರು ಕೂತಿದ್ದು ಮತ್ತು ಚಾಸಾ.3 ರವರು ಸದರಿ ಸ್ಥಳದ ಪಕ್ಕದಲ್ಲಿನ ತಮ್ಮ ಮನೆಯೊಳಗೆ ಮಲಗಿದ್ದು, ಈ ಸಮಯದಲ್ಲಿ ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡ ಕಾರಣ, ಭಾರತ ದಂಡ ಸಂಹಿತೆಯ ಕಲಂ 143 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಕೂಗಾಡಿಕೊಂಡು ದಾಂದಲೆ ಮಾಡಿದ ಕಾರಣ, ಭಾರತ ದಂಡ ಸಂಹಿತೆಯ ಕಲಂ 147 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಕೈಯಲ್ಲಿ ಅಪಾಯಕರ ಆಯುಧಗಳಾದ ಮಚ್ಚು ಮತ್ತು ದೊಣ್ಣೆಗಳನ್ನು ಹೊಂದಿದ್ದ ಕಾರಣ, ಭಾರತ ದಂಡ ಸಂಹಿತೆಯ ಕಲಂ 148 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು, ಆರೋಪಿತರಾದ ನೀವು ಚಾಸಾ.2 ರವರನ್ನು ಸುತ್ತುವರೆದು ಮುಂದೆ ಹೋಗದಂತೆ ತಡೆದು ಅಕ್ರಮ ತಡೆಯನ್ನುಂಟು ಮಾಡಿದ ಕಾರಣ ಭಾರತ ದಂಡ ಸಂಹಿತೆಯ ಕಲಂ 341 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಐದನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಏಕಾಏಕಿ ಚಾಸಾ.2 ರವರನ್ನು ಸುತ್ತುವರಿದು ಬೋಳಿಮಗನೇ ಸೂಳೇಮಗನೇ ಎಲ್ಲಿ ನಿಮ್ಮ ಅಣ್ಣ ತಮ್ಮ ಅವರೆಲ್ಲರನ್ನು ಸಾಯಿಸಿ ತೋರಣ ಕಟ್ಟುತ್ತೇವೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಶಾಂತಿ ಭಂಗ ಮಾಡಲಿ ಅಥವಾ ಇತರೆ ಯಾವುದೇ ಅಪರಾಧ ಮಾಡಲಿ ಎನ್ನುವ ಉದ್ದೇಶದಿಂದ ಅವರನ್ನು ಅವಮಾನಿಸಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.504 ಸಹವಾಚಕ ಕಲಂ.149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಆರನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು, ಚಾಸಾ.3 ರವರು ಆರೋಪಿತರಾದ ನಿಮ್ಮನ್ನು ಏಕೆ ನಮ್ಮ ಅಣ್ಣನನ್ನು ಮತ್ತು ತಮ್ಮನನ್ನು ಏಕೆ ಬೈಯುತ್ತಿದ್ದೀರಿ ಎಂದು ಕೇಳಿದಾಗ, ಬೈದಲ್ಲ ಹೊಡೆದು ಸಾಯಿಸುತ್ತೇವೆ, ನಿನ್ನನ್ನು ಸಾಯಿಸುತ್ತೇವೆ ಎಂದು 1ನೇ

ಆರೋಪಿತರಾದ ನೀವು ಚಾಸಾ.3 ರವರಿಗೆ ಮಚ್ಚಿನಿಂದ ತಲೆಗೆ ಬೀಸಿದಾಗ, ಚಾಸಾ.3 ರವರು ಬಲಗೈಯಿಂದ ತನ್ನ ತಲೆಗೆ ಮಚ್ಚಿನ ಏಟು ತಡೆಯಲು ಯತ್ನಿಸಿದಾಗ ಚಾಸಾ.3 ರವರ ಬಲಗೈ ಹಸ್ತದ ಹೆಬ್ಬೆರಳು ಮತ್ತು ತೋರುಬೆರಳನ ಮಧ್ಯಕ್ಕೆ 1 ನೇ ಆರೋಪಿತರಾದ ನೀವು ಹೊಡೆದಿರುತ್ತೀರಿ, ನಂತರ 2 ರಿಂದ 5 ನೇ ಆರೋಪಿತರಾದ ನೀವು ದೊಣ್ಣೆಗಳಿಂದ ಚಾಸಾ. 3 ರವರಿಗೆ ಹೊಡೆದಿರುತ್ತೀರಿ, ನಂತರ 1, 6 ರಿಂದ 14 ನೇ ಆರೋಪಿತರಾದ ನೀವು ಚಾಸಾ.2 ರವರ ಮೈ ಕೈಗೆ, ಬೆನ್ನು ತೊಡೆ ಭಾಗಕ್ಕೆ, ದೊಣ್ಣೆಗಳಿಂದ ಹೊಡೆಯುತ್ತಾ, ಮನೆಯ ಮುಂದೆ ಸುತ್ತಮುತ್ತ ತಳ್ಳಿಕೊಂಡು ಮತ್ತೆ ಮತ್ತೆ ದೊಣ್ಣೆಗಳಿಂದ ಚಾಸಾ.3 ಮತ್ತು 2 ರವರಿಗೆ ಹೊಡೆದಿರುತ್ತೀರಿ ಮತ್ತು ಜಗಳ ಬಿಡಿಸಲು ಬಂದ ಚಾಸಾ.1 ರವರನ್ನು 5 ನೇ ಆರೋಪಿತರಾದ ನೀವು ರಸ್ತೆಯ ಮಧ್ಯದಲ್ಲಿ ಕೆಳಗೆ ತಳ್ಳಿ ಕೆಡವಿ ಸಾಮಾನ್ಯ ಸ್ವರೂಪದ ಗಾಯವುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.324 ಸಹವಾಚಕ ಕಲಂ.149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ಆರೋಪಿತರು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು, ಆ ಪೈಕಿ 2 ಮತ್ತು 3 ನೇ ಆರೋಪಿತರಾದ ನೀವು ಚಾಸಾ.1 ರವರಿಗೆ ನಿಮ್ಮನ್ನು ಸಾಯಿಸದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನು ಎಸಗಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 16.09.2025 ರಂದು ತೆಗೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

1 ನೇ ಹೆ **ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.**
**ನಂಜನಗೂಡು**

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

<u>ಸಿ.ಸಿ.ಸಂಖ್ಯೆ:898/2024</u>

ಪಿರ್ಯಾದಿ : ಕವಲಂದೆ ಪೋಲಿಸರು

ವಿರುದ್ಧ

ಆರೋಪಿತರು :

1. ನಾಗೇಶ ಬಿನ್ ದೊರೆಸ್ವಾಮಪ್ಪ 36 ವರ್ಷ
2. ಬಸವಣ್ಣ ಕೆ ಎಸ್ ಬಿನ್ ಲೇಟ್ ಸಿದ್ದಪ್ಪ 71 ವರ್ಷ
3. ಸುನಿಲ್ ಕುಮಾರ್ ಬಿನ್ ಮಾದಪ್ಪ 28 ವರ್ಷ
4. ಶಿವಣ್ಣ ಉ.ಚಿಕ್ಕವ ಬಿನ್ ಲೇಟ್ ನಾಗಪ್ಪ 44 ವರ್ಷ
5. ಮಾದಪ್ಪ ಉ.ಕುಂಡ ಬಿನ್ ಲೇಟ್ ಪುಟ್ಟಬಸಪ್ಪ 48 ವರ್ಷ
6. ಸಿದ್ದೇಶ ಬಿನ್ ಲೇಟ್ ಸೋಮಣ್ಣ ಉ.ಸ್ವಾಮಿ 35 ವರ್ಷ

7 ರಘು ಬಿನ್ ಲೇಟ್ ಮುದ್ದಪ್ಪ 40 ವರ್ಷ

8 ಆನಂದ ಬಿನ್ ಲೇಟ್ ಮುದ್ದಪ್ಪ 49 ವರ್ಷ

9 ಲೋಕೇಶ ಬಿನ್ ದೊರೆಸ್ವಾಮಪ್ಪ 43 ವರ್ಷ

10 ಕುಮಾರ ಬಿನ್ ದೊರೆಸ್ವಾಮಪ್ಪ 47 ವರ್ಷ

11 ಶಿವಲಿಂಗಪ್ಪ ಉ. ದೊಡ್ಡವ ಬಿನ್ ಲೇಟ್ ನಾಗಪ್ಪ 43 ವರ್ಷ

12 ರವಿ ಬಿನ್ ರಾಜಪ್ಪ 34 ವರ್ಷ

13 ಪಂಜು ಬಿನ್ ಗುರುಮಲ್ಲಪ್ಪ 40 ವರ್ಷ

14 ಕುಮಾರ ಉ.ಪೋಳ ಬಿನ್ ಗುರುಮಲ್ಲಪ್ಪ 31 ವರ್ಷ

ಆರೋಪಿತರ ವಾಸ:ಕಾರೆಪುರ ಗ್ರಾಮ, ನಂಜನಗೂಡು ತಾಲ್ಲೂಕು

: ಆಪಾದನೆ :

ಪ್ರಶ್ನೆ:1– ಈ ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನೆಯನ್ನು ಅರ್ಥಮಾಡಿಕೊಂಡಿರುವಿರಾ?

1 ನೇ ಆರೋಪಿ ಉತ್ತರ:

2 ನೇ ಆರೋಪಿ ಉತ್ತರ:

3 ನೇ ಆರೋಪಿ ಉತ್ತರ:

4 ನೇ ಆರೋಪಿ ಉತ್ತರಃ

5 ನೇ ಆರೋಪಿ ಉತ್ತರಃ

6 ನೇ ಆರೋಪಿ ಉತ್ತರಃ

7 ನೇ ಆರೋಪಿ ಉತ್ತರಃ

8 ನೇ ಆರೋಪಿ ಉತ್ತರಃ

9 ನೇ ಆರೋಪಿ ಉತ್ತರಃ

10 ನೇ ಆರೋಪಿ ಉತ್ತರಃ

11 ನೇ ಆರೋಪಿ ಉತ್ತರಃ

12 ನೇ ಆರೋಪಿ ಉತ್ತರಃ

13 ನೇ ಆರೋಪಿ ಉತ್ತರಃ

14 ನೇ ಆರೋಪಿ ಉತ್ತರಃ

ಪ್ರಶ್ನೆಃ2– ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?

1 ನೇ ಆರೋಪಿ ಉತ್ತರಃ

2 ನೇ ಆರೋಪಿ ಉತ್ತರಃ

3 ನೇ ಆರೋಪಿ ಉತ್ತರಃ

4 ನೇ ಆರೋಪಿ ಉತ್ತರಃ

5 ನೇ ಆರೋಪಿ ಉತ್ತರಃ

6 ನೇ ಆರೋಪಿ ಉತ್ತರಃ

7 ನೇ ಆರೋಪಿ ಉತ್ತರಃ

**8 ನೇ ಆರೋಪಿ ಉತ್ತರಃ**

**9 ನೇ ಆರೋಪಿ ಉತ್ತರಃ**

**10 ನೇ ಆರೋಪಿ ಉತ್ತರಃ**

**11 ನೇ ಆರೋಪಿ ಉತ್ತರಃ**

**12 ನೇ ಆರೋಪಿ ಉತ್ತರಃ**

**13 ನೇ ಆರೋಪಿ ಉತ್ತರಃ**

**14 ನೇ ಆರೋಪಿ ಉತ್ತರಃ**

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
**ನಂಜನಗೂಡು**